ಮೇಲೆ ನೂರಾರು ಜನರನ್ನು ತುಂಬುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಬಂದಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡ ಕ್ರಮವೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಮುಂಜಾನೆ ಮತ್ತು ಸಾಯಂಕಾಲ ದಟ್ಟಣೆಯ ಸಮಯದಲ್ಲಿ ಕೆಲ ಮಾರ್ಗಗಳಲ್ಲಿ ಓವರ್ ಲೋಡಿಂಗ್ ಇರುವುದು ಕಂಡು ಬಂದಿದೆ.

ಆ. ಅತಿಯಾದ ಆರ್ಥಿಕ ಮುಗ್ಗಟ್ಟು ಹಾಗು ಸಿಬ್ಬಂದಿ ನೇಮಕಾತಿ ಮೇಲೆ ವಿಧಿಸಿದ ನಿರ್ಬಂಧದ ಪರಿಣಾಮವಾಗಿ 1989–90 ರಿಂದ 1991–92ರ ಅವಧಿಯಲ್ಲಿ ಅಭಿವೃದ್ಧಿಯು ಕುಂಠಿತಗೊಂಡಿತು. ವಿಭಾಗಗಳಿಗೆ ತಾತ್ಕಾಲಿಕವಾಗಿ ಚಾಲಕ:ನಿರ್ವಾಹಕರನ್ನು ಭರ್ತಿ ಮಾಡಿಕೊಳ್ಳಲು ತಿಳಿಸಲಾಗಿದೆ ಮತ್ತು ಹೆಚ್ಚಿನ ಸಂಪನ್ಮೂಲಗಳ ಕ್ರೋಢೀಕರಣದಿಂದಾಗಿ ಸಂಸ್ಥೆಯು ಏಪ್ರಿಲ್ 92ರಿಂದ ಫೆಬ್ರವರಿ 93ರ ಅವಧಿಯಲ್ಲಿ 322 ಅನುಸೂಚಿಗಳನ್ನು ಸೇರ್ಪಡೆ ಮಾಡಿರುತ್ತದೆ. ಮತ್ತು 1993–94ರಲ್ಲಿ ಮತ್ತೆ 1000 ಅನುಸೂಚಿಗಳನ್ನು ಸೇರಿಸುವ ಯೋಜನೆ ಇರುತ್ತದೆ.

ದಾವಣಗೆರೆಯಲ್ಲಿ ಕ್ರೀಡಾ ಹಾಸ್ಟೆಲ್‌ನ ವಸತಿ ಸೌಕರ್ಯ

1286 (1536): ಶ್ರೀ ವೈ.ಎಂ. ವೀರಣ್ಣ (ದಾವಣಗೆರೆ):–

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಾವಣಗೆರೆ ನಗರ ಕರ್ನಾಟಕದ ಮಧ್ಯಬಿಂದುವಾಗಿದ್ದು ಇಲ್ಲಿಗೆ ಅನೇಕ ಕಡೆಯಿಂದ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕಾಗಿ ಬರುತ್ತಿದ್ದು ಅವರಿಗೆ ಈಗಿರುವ ಯುವಜನ ಮತ್ತು ಕ್ರೀಡಾ ಹಾಸ್ಟೆಲ್‌ನ ವಸತಿ ಸೌಕರ್ಯ ಸಾಕಾಗುತ್ತಿಲ್ಲವೆಂಬುದು ಸರ್ಕಾರ ಗಮನಿಸಿದೆಯೇ;

ಆ. ಗಮನಿಸಿದ್ದಲ್ಲಿ ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):–

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಮೈಸೂರು ನಗರದಲ್ಲಿ ಸೀಮೆಎಣ್ಣೆ ಮಾರಾಟದ ಪರವಾನಗಿ ಪಡೆದವರ ಪಟ್ಟಿ

1287 (1618): ಶ್ರೀ ಕೆ. ಸಿದ್ದಯ್ಯ (ಸಂತೇಮಾರನ ಹಳ್ಳಿ):–

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೈಸೂರು ನಗರದಲ್ಲಿರುವ ಸೀಮೆಎಣ್ಣೆ ಮಾರಾಟದ ಪರವಾನಗಿ ಪಡೆದವರ ಪಟ್ಟಿಯನ್ನು ಸರ್ಕಾರವು ನೀಡುವುದೇ (ಪೂರ್ಣ ವಿಳಾಸ, ಪೂರೈಕೆ ಮಾಡಲಾದ ಸೀಮೆಎಣ್ಣೆ ಪ್ರಮಾಣ ಹಾಗೂ ಹೊಂದಿಸಿದ ಪಡಿತರ ಚೀಟಿಗಳ ಸಂಖ್ಯೆಯೊಂದಿಗೆ);

ಆ. ನಿಯಮ ರೀತ್ಯ ಸೀಮೆಎಣ್ಣೆ ಹಂಚುವ ಬಗ್ಗೆಯಲ್ಲಿ ಪರಿಣಾಮಕಾರಿ ತನಿಖೆ ಮಾಡಲಾಗುತ್ತಿದೆಯೇ;

ಇ. ಈ ದಿಸೆಯಲ್ಲಿ ನಿಯಮಗಳನ್ನು ಪಾಲನೆ ಮಾಡಿದೆಯೇ ಎಂಬುದನ್ನು ಪರಿಶೀಲಿಸಲು ಮೈಸೂರು ನಗರದಲ್ಲಿ ಪರಿವೀಕ್ಷಣಾ ಸಮಿತಿಗಳನ್ನು ಸರ್ಕಾರವು ರಚಿಸುವುದೇ;

ಈ. ಸರ್ಕಾರವು ಸ್ವಲ್ಪ ಪ್ರಮಾಣದ ಸೀಮೆಎಣ್ಣೆಯನ್ನು ಕಡಿಮೆ ದರದಲ್ಲಿ ಹಾಗೂ ಸ್ವಲ್ಪ ಪ್ರಮಾಣದ ಸೀಮೆಎಣ್ಣೆ ಹೆಚ್ಚಿನ ದರದಲ್ಲಿ ಉರುವಲುಗಾಗಿ ಮಾರಾಟ ಮಾಡಲು ಸೂಕ್ತ ಕ್ರಮ ಕೈಗೊಳ್ಳುವುದೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ. ಪಟ್ಟಿಗಳ ಪ್ರತಿಗಳನ್ನು ಸದನದ ಮೇಜಿನ ಮೇಲೆ ಇಡಲಾಗಿದೆ.

ಆ. ಹೌದು.

ಇ. ಸೀಮೆಎಣ್ಣೆಯು ಸೇರಿದಂತೆ ಪಡಿತರ ವಸ್ತುವನ್ನು ನ್ಯಾಯಬೆಲೆ ಅಂಗಡಿಗಳ ಮುಖಾಂತರ ಪರಿಣಾಮಕಾರಿಯಾಗಿ ವಿತರಿಸಲು ಪ್ರತಿ ನ್ಯಾಯಬೆಲೆ ಅಂಗಡಿಗೆ ಒಂದರಂತೆ ಮೈಸೂರು ನಗರದಲ್ಲಿ ಜಾಗೃತ ಸಮಿತಿಗಳನ್ನು ರಚಿಸಲಾಗಿದೆ.

ಈ. ಸೀಮೆಎಣ್ಣೆಯನ್ನು ಗೃಹ ಬಳಕೆ ಉದ್ದೇಶಕ್ಕಾಗಿ ಕಾರ್ಡುದಾರರಿಗೆ ಲೀಟರ್ ಒಂದಕ್ಕೆ ರೂ. 2.81 ರಂತೆ ಹಾಗೂ ಕೈಗಾರಿಕೆ ಉದ್ದೇಶಕ್ಕಾಗಿ ಲೀಟರ್ ಒಂದಕ್ಕೆ ರೂ.6.18 ರಂತೆ ನೀಡಲಾಗುತ್ತಿದೆ.

ಸರ್ಕಾರಿ ನೌಕರನ ವರ್ಗಾವಣೆಗೆ ನೀಡಿದ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಇತ್ಯಾದಿಗಳ ಮೊತ್ತ

1288 (1398): ಶ್ರೀ ಕೆ. ಸಿದ್ದಯ್ಯ (ಸಂತೇಮಾರನ ಹಳ್ಳಿ):–

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ. ಸರ್ಕಾರಿ ನೌಕರರಿಗೆ 1990–91 ಹಾಗೂ 1991–92 ರಲ್ಲಿ ಕೊಡಲಾದ ಒಟ್ಟು ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಹಾಗೂ ಇತರೆ ಭತ್ಯಗಳು ಇದ್ದಲ್ಲಿ ಇವುಗಳ ಮೊತ್ತ (ಪ್ರತ್ಯೇಕ ಮಾಹಿತಿ ನೀಡುವುದು);

ಬಿ. ಸರ್ಕಾರಿ ನೌಕರನ ವರ್ಗಾವಣೆ ಸಂದರ್ಭದಲ್ಲಿ ಅವನ ಕುಟುಂಬದ ಎಷ್ಟು ಸದಸ್ಯರಿಗೆ ಪ್ರಯಾಣಭತ್ಯೆ ಮತ್ತು ದಿನಭತ್ಯೆ ಇತ್ಯಾದಿಗಳನ್ನು ನೀಡಲಾಗುತ್ತಿದೆ;

ಸಿ. ಒಂದೇ ಕುಟುಂಬದ ಸರ್ಕಾರಿ ನೌಕರರಾದ ಗಂಡ – ಹೆಂಡತಿ, ಒಂದೇ ಮನೆಯಲ್ಲಿ ವಾಸವಾಗಿದ್ದರೆ ಮನೆ ಬಾಡಿಗೆ ಭತ್ಯೆಯನ್ನು ಪಡೆಯುತ್ತಾರೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಎ.

ವರ್ಷ	ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ	ಇತರೆ ಭತ್ಯೆಗಳು
		ಲಕ್ಷ ರೂ.ಗಳಲ್ಲಿ
1990–91 (ಲೆಕ್ಕ)	2285.43	5552.99
1991–92 (ಪರಿಷ್ಕೃತ) (ಅಂದಾಜು)	2105.66	6966.23